**DW-2:** ಶ್ರೀರಾಮಪ್ಪ

ದಿನಾಂಕಃ **14.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿಯ ಪರವಾಗಿ ಶ್ರೀ ಹೆಚ್.ಎನ್.ಎನ್. ವಕೀಲರಿಂದ**

1. ಸುಮಾರು 40 ವರ್ಷಗಳಿಂದ ತಿರುಮಣಿ ಗ್ರಾಮದಲ್ಲಿ ವಾಸವಿದ್ದೇನೆ. ನನ್ನನ್ನು ನ್ಯಾಯಾಲಯಕ್ಕೆ 6 ನೇ ಪ್ರತಿವಾದಿ ವೆಂಕಟೇಶ್ ರವರು ಸಾಕ್ಷಿ ನುಡಿಯುವ ಸಲುವಾಗಿ ಕರೆದಿರುತ್ತಾರೆ. ವೆಂಕಟೇಶ್ ನಮ್ಮ ಸಂಬಂಧಿಕರಲ್ಲ. ಆದರೆ ನಮ್ಮ ಜನಾಂಗದವರು. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರವನ್ನು ಯಾರು ತಯಾರಿಸಿದ್ದಾರೆ ಗೊತ್ತಿಲ್ಲ. ಪ್ರಮಾಣಪತ್ರವನ್ನು ಬರೆಯಲು ವೆಂಕಟೇಶ್ ರವರು ಮಾಹಿತಿಯನ್ನು ನೀಡಿರುತ್ತಾರೆ. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳಿಗೆ ಸೇರಿದ್ದೆಂದು ನನಗೆ 6 ನೇ ಪ್ರತಿವಾದಿ ಹೇಳಿರುತ್ತಾರೆ. ವೇಲೂರು ವೆಂಕಟಯ್ಯ ಮತ್ತು ಸಹೋದರರು ವಿಭಾಗವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ವೇಲೂರು ವೆಂಕಟಯ್ಯ ರವರಿಗೆ ಸ್ವತ್ತು ಅವರ ತಾಯಿಯ ಕಡೆಯಿಂದ ಬಂದಿರುತ್ತದೆ.

2. ನನ್ನ ಪ್ರಮಾಣಪತ್ರವದಲ್ಲಿ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಬರೆಸಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ವಿಭಾಗವಾಗಿಲ್ಲ ಹಾಗೆಯೇ ಬೇಸಾಯ ಮಾಡುತ್ತಿದ್ದಾರೆ ಆ ಕಾರಣ ಭಾಗ ಬರಬೇಕೆಂದು ಹೇಳಿದ್ದೇನೆ. ದಾವಾ ಸ್ವತ್ತಿನ ಪಕ್ಕ ನನ್ನ ಆಸ್ತಿ ಇರುತ್ತದೆ. ದಾವಾ ಸ್ವತ್ತುಗಳ ಪಕ್ಕ ನನ್ನ ಸ್ವತ್ತು ಇರುವ ಬಗ್ಗೆ ಪ್ರಮಾಪತ್ರದಲ್ಲಿ ಬರೆಸಿದ್ದೇನಾ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ತುಂಬಾ ದಿನಗಳಿಂದ ವಾದಿಗಳು ನನ್ನೊಂದಿಗೆ ಅನೋನ್ಯವಾಗಿದ್ದಾರೆ. ನಾನು

ನ್ಯಾಯಾಲಯಕ್ಕೆ ಬರುವ ವಿಚಾರ ಜಯಮ್ಮ ರವರಿಗೆ ತಿಳಿಸಿ ಬಂದಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆಯ ವಿಚಾರಗಳು ಗೊತ್ತಿಲ್ಲದೇ ಇದ್ದರೂ ವೇಲೂರು ವೆಂಕಟೇಶ ರವರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೆಂಕಟೇಶ್ ರವರಿಗೆ ಯಾವ ರೀತಿ ಸ್ವತ್ತಿನ ಮೇಲೆ ಹಕ್ಕು ಬಂದಿದೆ ಎಂಬ ವಿಚಾರ ನನಗೆ ಇದುವರೆಗೂ ತಿಳಿದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.